ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು-560 001
☎:: 91-080-22212408
ಫ್ಯಾಕ್ಸ್: 91-080-22277528

ಸಂಖ್ಯೆ: ಸಿಬ್ಬಂದಿ/ನೇಮಕಾತಿ.164/2010-2011 ದಿನಾಂಕ 28-01-2013

## ಪ್ರಕಟಣೆ

ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಂಬಂಧ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ಆ ಪ್ರಕಾರ ಭೂಮಾಪಕರ ಹುದ್ದೆಗೆ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಪ್ರಕಟಿಸಲಾದ ತಾತ್ಕಾಲಿಕ / ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಬಹುಮುಖ್ಯವಾಗಿದ್ದು, ಅದರಂತೆ ಮೂಲ ದಾಖಲೆಗಳ ಪರಿಶೀಲನೆಯನ್ನು ದಿನಾಂಕ 17-12-2012 ರಿಂದ 21-12-2012 ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಇಲಾಖಾ ವತಿಯಿಂದ ನಡೆಸಲಾಗಿದೆ. ಈ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಬಗ್ಗೆ ಸೂಚನಾ ಪತ್ರವನ್ನು ಎಲ್ಲಾ ಅಭ್ಯರ್ಥಿಗಳಿಗೆ ತ್ವರಿತ ಅಂಚೆ ಮೂಲಕ ಕಳುಹಿಸಲಾಗಿತ್ತು. ಕಾರಣಾಂತರಗಳಿಂದ ಸೂಚನಾ ಪತ್ರವು ತಲುಪದೇ ಇದ್ದ ಸಂದರ್ಭದಲ್ಲಿ ಅದಕ್ಕೆ ಕಾಯದೇ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾದ ಪರಿಶೀಲನಾ ವೇಳಾಪಟ್ಟಿಯಂತೆ ಪರಿಶೀಲನೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಈ ವಿಷಯವನ್ನು ದೈನಂದಿನ ಪ್ರಚಲಿತ ಪತ್ರಿಕೆಗಳಾದ ' ಪ್ರಜಾವಾಣಿ ' ಮತ್ತು ' ಕನ್ನಡಪ್ರಭ ' ಕನ್ನಡ ಪತ್ರಿಕೆಗಳಲ್ಲಿ ಹಾಗೂ 'Deccan Herald' English ಪತ್ರಿಕೆಯಲ್ಲಿ ದಿನಾಂಕ 07-12-2012 ರಂದು ಪ್ರಚುರಪಡಿಸಲಾಗಿದೆ.

ಆದರೆ ಗೊತ್ತುಪಡಿಸಿದ ದಿನಾಂಕದಂದಾಗಲಿ, ಪರಿಶೀಲನೆಗೆ ಗೊತ್ತುಪಡಿಸಿದ ಅವಧಿಯಲ್ಲಾಗಲಿ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳಿಗೆ ದಿನಾಂಕ 08-01-2013 ರಂದು ನೋಟಿಸ್ ನೀಡಿ, ಆ ನೋಟಿಸ್ ತಲುಪಿದ 5 ದಿನದೊಳಗಾಗಿ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಸೂಚಿಸಲಾಗಿತ್ತು. ಆದರೂ ಸಹ ಈವರೆವಿಗೂ ಹಾಜರಾಗದ ಅಭ್ಯರ್ಥಿಗಳಿಗೆ ಅಂತಿಮ ಅವಕಾಶ ನೀಡಬೇಕೆಂಬ ಉದ್ದೇಶದಿಂದ ದಿನಾಂಕ 08-02-2013 ರ ವರೆಗೆ ಮೂಲ ಮತ್ತು ಜೆರಾಕ್ಸ್ ದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಾಗಬೇಕಾಗಿ ಸೂಚಿಸಿದೆ. ಆದುದರಿಂದ ನಿಗದಿತ ದಿನಾಂಕದೊಳಗೆ ಮೂಲ ದಾಖಲೆಗಳ ಪರಿಶೀಲನೆಗೆ ಕಡ್ಡಾಯವಾಗಿ ಹಾಜರಾಗದ ಅಭ್ಯರ್ಥಿಗಳ ಆಯ್ಕೆಯನ್ನು ಇನ್ನಾವುದೇ ಮುಂದಿನ ತಿಳುವಳಿಕೆ ನೀಡದೇ, ಆಯ್ಕೆಪಟ್ಟಿಯಿಂದ ಕೈಬಿಡಲಾಗುವುದು.

ಅಧ್ಯಕ್ಷರು,
ನೇಮಕಾತಿ ಸಮಿತಿ ಹಾಗೂ ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.